ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.1639/2024

| | | | |
|---|---|---|---|
| ಹೆಸರು | : | ಜ್ಞಾನಾನಂದ | ಸಿ .ಡಬ್ಲ್ಯೂ :3 |
| ತಂದೆ ಹೆಸರು | : | ಶಿವಣ್ಣ | ಪಿ .ಡಬ್ಲ್ಯೂ :1 |
| ವಯಸ್ಸು | : | 48 ವರ್ಷ | |
| ಉದ್ಯೋಗ | : | CHC 74 , ಗುಬ್ಬಿ ಪೊಲೀಸ್ ಠಾಣೆ | |
| ವಾಸಸ್ಥಳ | : | ಗುಬ್ಬಿ | |

ಸಾಕ್ಷಿಯನ್ನು ದಿಃ 06-04-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಜೂನ್ 2023 ರಿಂದ ಇಂದಿನವರೆಗೂ ಗುಬ್ಬಿ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿಃ 28-05-2024 ರಂದು ಬೆಳಗ್ಗೆ 7.30 ರ ಸಮಯದಲ್ಲಿ ನಾನು ಮತ್ತು ಚಾಸಾ -1 ರಮರ ಠಾಣೆಯಲ್ಲಿದ್ದಾಗ ಚಾಸಾ -1 ರವರಿಗೆ ಗುಬ್ಬಿ ಪಟ್ಟಣದ ಸಿವಿಆರ್ ಲಿಕ್ಕರ್ ಅಂಗಡಿಯ ಮುಂಭಾಗದಲ್ಲಿ ಯಾರೋ ಒಬ್ಬ ವ್ಯಕ್ತಿಯು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬುದಾಗಿ ಖಚಿತ ಮಾಹಿತಿ ಬಂದಿದ್ದು , ನಾವು ಸ್ಥಳಕ್ಕೆ ಹೋಗಿ ನೋಡಲಾಗಿ ಸದರಿ ಮಾಹಿತಿ ನಿಜವಾಗಿತ್ತು . ಸದರಿ ಸ್ಥಳದಲ್ಲಿ ವ್ಯಕ್ತಿಯನ್ನು ಹಿಡಿದು ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಆತನು ತನ್ನ ಹೆಸರು ಮಂಜುನಾಥ ಗುಬ್ಬಿಯ ವಾಸಿ ಎಂಬುದಾಗಿ ವಿಚಾರ ತಿಳಿಸಿದರು . ನಂತರ ಸ್ಥಳಕ್ಕೆ ಪಂಚರನ್ನು ಬರಮಾಡಿಕೊಂಡು ಅವರು ಬಂದ ನಂತರ ಸ್ಥಳದಲ್ಲಿದ್ದ ರಟ್ಟಿನ ಬಾಕ್ಸ್ ನಲ್ಲಿದ್ದ ಮದ್ಯನ ಬಾಟಲ್ ಗಳನ್ನು ಪರಿಶೀಲಿಸಲಾಗಿ 90 ಎಂ ಎಲ್ ನ OC Whisky 49 ಪೌಚ್ ಗಳು ಇದ್ದವು . ಆರೋಪಿತರನ್ನು ವಿಚಾರಿಸಲಾಗಿ ಅವರ ಬಳಿ ಮದ್ಯ ಮಾರಾಟ ಮಾಡಲು ಯಾವುದೇ ಪರವನಾಗಿ ಇರಲಿಲ್ಲ , ಅಕ್ರಮ ಲಾಭಗಳಿಸುವ ಉದ್ದೇಶದಿಂದ ಮದ್ಯ ಮಾರಾಟ ಮಾಡುತ್ತಿರುವುದಾಗಿ ಅವರು ಹೇಳಿದರು . ಈಗಾಗಲೇ 15 ಟೆಟ್ರಾ ಪ್ಯಾಕ್‌ಗಳನ್ನು ಮಾರಾಟ ಮಾಡಿದ್ದೇನೆ ಅದರಿಂದ ರೂ . 750/- ಬಂದಿದೆ ಎಂದು ತಿಳಿಸಿದರು . ಮುಂದಿನ ಕ್ರಮವಾಗಿ ಆರೋಪಿತರನ್ನು ಸ್ಥಳದಲ್ಲಿ ದೊರೆತ ಅಕ್ರಮ ಮದ್ಯದ ಪೌಚ್ ಗಳ ಸಮೇತ ಠಾಣೆಗೆ ಕರೆತಂದೆವು .

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿತರನ್ನು ನೋಡಿ ಗುರುತಿಸಿದ್ದಾರೆ . ಆ ದಿನ ಜಪ್ತು

ಪಡಿಸಿಕೊಂಡ ಮದ್ಯದ ಪೌಚ್ ಗಳನ್ನು ನೋಡಿದರೆ ಗುರುತಿಸುತ್ತೇನೆ . ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಸೀಲ್ ಮಾಡಿದ 26 ಬಿಳಿಯ ಬಟ್ಟೆಯ ಚೀಲಗಳನ್ನು ಅನುಮತಿಯ ಮೇರೆಗೆ ಒಡೆದು ತೆರೆದು ಅವುಗಳ ಒಳಗೆ ಲಭ್ಯವಿದ್ದ ಮದ್ಯದ ಪೌಚ್ ಗಳನ್ನು ತೋರಿಸಲಾಗಿ ಅವುಗಳನ್ನು ಗುರುತಿಸಿದ್ದಾರ ಅವುಗಳನ್ನು ಒಟ್ಟಾರೆ ಮು ಮಾ -1 ಎಂದು ಗುರುತಿಸಲಾಯಿತು . ತನಿಖಾಧಿಕಾರಿಗಳ ಮುಂದೆ ಈ ಕುರಿತು ಹೇಳಿಕೆ ನೀಡಿದ್ದೇನೆ .

<u>ಪಾಟಿ ಸವಾಲು ಃ ಆರೋಪಿತರ ಪರ ವಕೀಲರಿಂದ</u>

ಠಾಣೆಯಿಂದ ಯಾವುದೇ ಕರ್ತವ್ಯದ ಮೇರೆಗೆ ಹೊರಗೆ ಹೋಗಬೇಕಿದ್ದಲ್ಲಿ ಠಾಣೆಯಲ್ಲಿರುವ ಕಚ್ಚಾ ಪುಸ್ತಕದಲ್ಲಿ ನಮೂದಿಸಬೇಕು ಎಂದರೆ ಸರಿ . ಸದರಿ ವಿವರಗಳುಳ್ಳ ದಾಖಲೆಯನ್ನು ತನಿಖಾಧಿಕಾರಿಗಳಿಗೆ ನೀಡಿದ್ದೀರಾ ಎಂದರೆ ಸಾಕ್ಷಿಯು ಎಸ್ ಹೆಚ್ ಡೈರಿಯಲ್ಲಿ ನಮೂದಿಸಲಾಗುತ್ತದೆ , ನಾವು ನಮೂದಿಸುವುದಿಲ್ಲ , ಠಾಣಾಧಿಕಾರಿಗಳು ನಮೂದಿಸುತ್ತಾರೆ ಎಂದು ತಿಳಿಸಿದ್ದಾರೆ . ಮಾಹಿತಿ ಬಂದ ಸ್ಥಳಕ್ಕೆ ಚಾಸಾ -1, ನಾನು ಮತ್ತು ಚಾಸಾ -2 ಹೋಗಿದ್ದೆವು . CVR ಲಿಕ್ಕರ್ ಶಾಪ್ ನ ಅಂಗಡಿಯ ಬಳಿ ಬೇರೆ ಬೇರೆ ಅಂಗಡಿಗಳು ಇವೆ . CVR ಲಿಕ್ಕರ್ ಶಾಪ್ ನ ಪೂರ್ವದಲ್ಲಿರುವ SRS Auto Mobiles ನಲ್ಲಿ CC Camara ಅಳವಡಿಸಲಾಗಿದೆ ಎಂದರೆ ಸರಿ . CVR ಲಿಕ್ಕರ್ ಶಾಪ್ ನ ಎದುರು ಭಾಗದಲ್ಲಿರುವ ಮಾರುತಿ ಲಾಡ್ಜಿಂಗ್ ಮತ್ತು ರೆಸ್ಟೋರೆಂಟ್ ನಲ್ಲಿ CC Camara ಅಳವಡಿಸಲಾಗಿದೆ ಎಂದರೆ ಸರಿ. CVR ಲಿಕ್ಕರ್ ಶಾಪ್ ನಲ್ಲಿ ಮುಂಭಾಗಕ್ಕೆ CC Camara ಅಳವಡಿಸಲಾಗಿದೆ ಎಂದರೆ ಸರಿ . ಚಾಸಾ-1 ರವರು ಪಂಚರಿಗೆ ನೋಟಿಸ್ ನೀಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ . ಅವರ ಹೆಸರು ವಿಳಾಸ ಗೊತ್ತಿಲ್ಲ .

ಮೇಲೆ ಹೇಳಿದ ದಿನಾಂಕದಂದು ಮೇಲೆ ಹೇಳಿದ ಸ್ಥಳಕ್ಕೆ ನಾನು ಹೋಗಿಲ್ಲ , ನಾನು ಹೇಳುವಂತೆ ಆರೋಪಿತರು CVR ಲಿಕ್ಕರ್ ಶಾಪ್ ನ ಮುಂದೆ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರಲಿಲ್ಲ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ನೀಡಿರುವ ಹೇಳಿಕೆಯ ವಿವರಗಳನ್ನು ತಿಳಿದುಕೊಂಡಿದ್ದೇನೆ . ಮೇಲೆ ಹೇಳಿದ ದಿನಾಂಕದಂದು ಠಾಣೆಯಲ್ಲಿ ಯಾರು SHO ಆಗಿದ್ದರು ಎಂದು ಈಗ ಹೇಳಲು ನೆನಪಾಗುತ್ತಿಲ್ಲ . ಹೇಳಿ ಕೇಳಿ ತಿಳಿಸಿರುವಂತೆ ಚಾಸಾ -1 ರವರಿಂದ ವರದಿ ಪಡೆದು SHO ರವರಿಗೆ ನೀಡಿದ್ದಲ್ಲಿ ಅವರ ಹೆಸರು ಹೇಳುತ್ತಿದ್ದಿರಿ , ಆ ರೀತಿ ಮಾಡಿಲ್ಲದಿರುವ ಕಾರಣ ಹೆಸರು ನೆನಪಾಗುತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಠಾಣಾ ಅಂಕಿ ಅಂಶಗಳ ಸಲುವಾಗಿ ಆರೋಪಿತರ ವಿರುದ್ದ ಸುಳ್ಳು ವಿವರಗಳ ಪ್ರಕರಣ ದಾಖಲಿಸಿದ್ದು , CVR ಲಿಕ್ಕರ್ ಶಾಪ್ ನ ಸಮೀಪದಲ್ಲಿ ಎಸೆಯಲಾಗಿದ್ದ ಮು ಮಾ -1

ಪೌಚ್ ಗಳನ್ನು ಸಂಗ್ರಹಿಸಿ ಪ್ರಕರಣದಲ್ಲಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ . ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹಾ ಚಾಸಾ -1 ರವರು ಮೇಲಾಧಿಕಾರಿಯಾಗಿರುವ ಕಾರಣ ಅವರು ನೀಡಿರುವ ವರದಿಗೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಮುಮಾ -1 ಟೆಟ್ರಾ ಪ್ಯಾಕ್ ಗಳು ನಾನು ಹೇಳುವಂತೆ OC Whisky ಟೆಟ್ರಾ ಪ್ಯಾಕ್ ಗಳಲ್ಲ, ಹೈ ವಾರ್ಡ್ಸ್ Whisky ಟೆಟ್ರಾ ಪ್ಯಾಕ್ ಗಳು ಎಂದರೆ ಸರಿ . ಆರೋಪಿತರನ್ನು ಇದೇ ಮೊದಲು ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.